## ರಟ್ಟಿನ ಕೂಡಲಸಂಗಮ



ಉಪಯೋಗಿಸಿ ಬಿಟ್ಟ ಥರ್ಮಾಕೋಲ್, ಪ್ಲಾಸ್ಟಿಕ್ ಕೊಳವೆ, ರಟ್ಟಿನ ತುಣುಕು, ಮಿಂಚಿನ ಹಾಳೆಗಳನ್ನು ಬಳಸಿ ಬಸವಣ್ಣನವರ ಐಕ್ಯಸ್ಥಳ ಕೂಡಲಸಂಗಮ ಮಾದರಿ ತಯಾರಿಸಲಾಗಿದ್ದು ಆಕರ್ಷಕವಾಗಿದೆ. ವಿಶ್ವಗುರು ಬಸವಣ್ಣನವರ ಐಕ್ಯ ಸ್ಥಳ ಕೂಡಲಸಂಗಮ ಇಲ್ಲಿ ತ್ಯಾಜ್ಯದಿಂದ ರೂಪ ಪಡೆದಿದೆ. ಸುಂದರ ಮೆಟ್ಟಿಲುಗಳು, ಚಂದದ ಗೋಪುರ, ಈಶ್ವರಲಿಂಗ ನೋಡಲು ಬಲು ಅಂದವಾಗಿ

ಬಾಗಲಕೋಟ ಜಿಲ್ಲೆಯ ಗುಳೇದಗುಡ್ಡದ ಸುರೇಶ ಕಾಳಿ ಎಂಬುವವರು ತಮ್ಮ ಪ್ರೆಸ್‌ದಲ್ಲಿ ಉಪಯೋಗಿಸಿ ಬಿಟ್ಟ ಕಾಗದ, ರಟ್ಟುಗಳನ್ನು ಬಿಸಾಡದೇ ಅದನ್ನು ಓರಣವಾಗಿ ಜೋಡಿಸಿ, ಅದಕ್ಕೆ ಚಂದದ ರೂಪಕೊಟ್ಟು ಆಕರ್ಷಕ ಕೂಡಲಸಂಗಮವನ್ನು ತಯಾರಿಸಿದ್ದಾರೆ.

ಚಿತ- ಬರಹ:

**ಮಲ್ಲಿಕಾರ್ಜುನ ರಾಜನಾಳ, ಬಾಗಲಕೋಟ**



## ಮಗೇಬೈಲು ಜಲಪಾತ

ಶೃಂಗೇರಿ ತಾಲೂಕಿನ ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆಇರುವ ಮಗೇಬೈಲು ಜಲಪಾತ ವರ್ಷವಿಡಿ ದುಮ್ಮಿಕ್ಕುತ್ತದೆ. 60–70 ಅಡಿ ಎತ್ತರದಿಂದ ಜಿಗಿಯುವ ಜಲಪಾತದ ಸಮೀಪದವರೆಗೂ ವಾಹನ ತೆರಳಲು ರಸ್ತೆ ಇಲ್ಲ. ಮಗೇಬೈಲು ಚಂದ್ರಶೇಖರ್ ಎಂಬುವವರ ಮನೆಯಿಂದ 1.25 ಕಿ.ಮೀ. ಕಾಲ್ನಡಿಗೆಯಲ್ಲಿ ತೆರಳಬೇಕು. ಬೃಹತ್ ಕಾಡಿನ ಮರಗಳ ನಡುವೆ ಇರುವ ಜಲಪಾತದ ಬಗ್ಗೆ ಪ್ರವಾಸಿಗರಿಗೆ ಸೂಕ್ತ ಮಾಹಿತಿ ಇಲ್ಲದಿರುವುದರಿಂದ ಇಲ್ಲಿಗೆ ಭೇಟಿ ನೀಡುವವರ ಸಂಖ್ಯೆ ಕಡಿಮೆಯಾಗಿದೆ.

**– ಕೆರೆಮನೆ ಕೆ.ಎಲ್.ಗೋಪಾಲಕೃಷ್ಣ, ಶೃಂಗೇರಿ**

## ಕೋಳಿಗೆಷ್ಟು ಕಾಲು?

ಸಾಮಾನ್ಯವಾಗಿ ಕೋಳಿಗೆ ಎಷ್ಟು ಕಾಲು ಅಂತ ಕೇಳಿದರೆ ಅದೇನು ಮಹಾ ಎರಡು ಕಾಲು ಅಂತ ಹೇಳಿಬಿಡಬಹುದು. ಆದರೆ ಈ ಕೋಳಿಗೆ ಮೂರಲ್ಲ, ನಾಲ್ಕು ಕಾಲುಗಳು ಇವೆ ಕಣ್ರೀ,

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಕೊಂಡ್ಲಹಳ್ಳಿಯ ಸೋಮಸುಂದರ್ ಅವರ ಅಕ್ಷಯ ಚಿಕನ್ ಸೆಂಟರ್‌ಗೆ ಹಿರಿಯೂರಿನಿಂದ ಪೂರೈಕೆಯಾದ ಮಾಂಸದ ಕೋಳಿಗಳಲ್ಲಿ ಒಂದು ಕೋಳಿಗೆ ಹಿಂಭಾಗದಲ್ಲಿ ವಿಶೇಷವಾಗಿ ಎರಡು ಕಾಲುಗಳು ಬೆಳವಣಿಗೆಯಾಗಿವೆ. ಈ ಎರಡು ಕಾಲುಗಳು ನಡೆದಾಡಲು ಬಳಕೆಯಾಗದೇ ಇದ್ದರೂ ನಾಲ್ಕು ಕಾಲುಗಳನ್ನು ಹೊಂದಿರುವ ಕೋಳಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ.

ಮೊಳಕಾಲ್ಮೂರು ತಾಲೂಕು ಪಶು ಚಿಕಿತ್ಸಾ ಕೇಂದ್ರದ ಸಹಾಯಕ ನಿರ್ದೇಶಕ ಬೊಮ್ಮಣ್ಣ ಜೀನ್ಸ್‌ಗಳಲ್ಲಿ ವ್ಯತ್ಯಾಸವಾದಾಗ ಈ ರೀತಿಯ ಬೆಳವಣಿಗೆಗಳು ಅಪರೂಪಕ್ಕೆ ಕಂಡು ಬರುತ್ತವೆ ಎನ್ನುತ್ತಾರೆ.

**– ಕೊಂಡ್ಲಹಳ್ಳಿ ಟಿ. ರಾಮಚಂದ್ರಪ್ಪ, ಚಿತ್ರದುರ್ಗ**

